Rotary
2025-26
ಮಿಡ್‌ಟೌನ್ ನ್ಯೂಸ್
# Midtown News
R.I. DISTRICT 3182 Zone-10 Club No. 21853 Charter Date : 16-05-1984
In House Bulletin of Rotary Club Shimoga Mid Town

R.I. President : Rtn. Francesco Arezzo
Dist. Governor : Rtn. Palaksha K.
Asst. Governor : Rtn. K.P. Shetty

President : Rtn. Harsha Kamath
Secretary : Rtn. Manjunath R.N.

Director : Rtn. Anil P. Shetty
Editor : Rtn. Anand I.R.
Co-Chairmen : Rtn. Narendra K.V.
Members : Rtn. Sreenag, Rtn. Raghupathi S., Rtn. K.V.L. Raju

We meet on 2nd, 3rd and 4th Thursday at Rotary Mid Town Hall, SHIVAMOGGA-577201 rotaryshimogamidtown@gmail.com

Vol. 42 31 - 7 - 2025 ISSUE 4

## New Leadership Month

### ದಿನಾಂಕ 24-7-2025ರ ವಾರದ ಸಭೆಯ ವರದಿ

ದಿನಾಂಕ 24-7-2024ರ ವಾರದ ಸಭೆಯು ಈ ಸಾಲಿನ ಪ್ರಥಮ ಕ್ಲಬ್ ಅಫೇರ್ಸ್ ಸಭೆಯಾಗಿತ್ತು. ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ರೊ. ಹರ್ಷ ಬಿ. ಕಾಮತ್ ಇವರು ವಹಿಸಿದ್ದರು ಹಾಗೂ ಸಭೆಗೆ ಆಗಮಿಸಿದ್ದ ಎಲ್ಲಾ ರೋಟರಿ ಸದಸ್ಯರನ್ನು ಆಹ್ವಾನಿಸಿದರು. ಮೊದಲಿಗೆ ರೊ. ಉಜ್ವಲ ರವಿ ಇವರು ರೋಟರಿ ಮಾಹಿತಿಯನ್ನು ವಾಚಿಸಿದರು.

ಕಾರ್ಯದರ್ಶಿಗಳಾದ ರೊ. ಆರ್.ಎನ್. ಮಂಜುನಾಥ್ ಇವರು ದಿನಾಂಕ 19-7-2025ರಂದು ನಡೆದ ಜಂಟಿ ಕಾರ್ಯಕಾರಿ ಮಂಡಳಿ ಸಭೆಯ ನಡಾವಳಿಯನ್ನು ಓದಿ ಸಭೆಯ ಅನುಮೋದನೆಯನ್ನು ಪಡೆದುಕೊಂಡರು.

2024-25ನೇ ಸಾಲಿನ ಖಜಾಂಚಿಗಳಾದ ರೊ. ಡಾ|| ಧರಣಿ ದೇವಂಗಿಯವರು ಜೂನ್ ಮಾಹೆಯ ಲೆಕ್ಕಪತ್ರ, ಹಾಗೂ 2024-25ರ ಆಡಿಟ್ ವರದಿಯನ್ನು ಮಂಡಿಸಿದರು. ಇದಕ್ಕೆ ಸಭೆಯು ಅನುಮೋದನೆ ನೀಡಿತು. ಖಜಾಂಚಿಯವರಾದ ರೊ. ಬದ್ರಿ ಪ್ರಸಾದ್ ಇವರ ಅನುಪಸ್ಥಿತಿಯಲ್ಲಿ ಕಾರ್ಯದರ್ಶಿ ರೊ. ಆರ್.ಎನ್. ಮಂಜುನಾಥ್‌ರವರು ಶುಲ್ಕ ಸಂಗ್ರಹ ಬಗ್ಗೆ ಮಾಹಿತಿಯನ್ನು ನೀಡಿದರು.

ಕ್ಲಬ್ ಸರ್ವೀಸ್ ನಿರ್ದೇಶಕರಾದ ರೊ. ಅನಿಲ್ ಪಿ. ಶೆಟ್ಟಿಯವರು ಎಲ್ಲಾ ಸದಸ್ಯರುಗಳು ರೋಟರಿ ಆ್ಯಪನ್ನು ಡೌನ್‌ಲೋಡ್ ಮಾಡಿಕೊಳ್ಳುವಂತೆ




ಮನವಿ ಮಾಡಿಕೊಂಡರು. ರೊ. ಜಿ.ಎನ್.ಎನ್. ಮೂರ್ತಿಯವರು ದಿನಾಂಕ 10-7-2025ರಂದು ನಡೆದ ನಮ್ಮ ಕ್ಲಬ್ಬಿನ ಪದಗ್ರಹಣ ಸಮಾರಂಭದ ಸಮಯದಲ್ಲಿ ರೊ. ಪಿಡಿಜಿ ನಾರಾಯಣ್, ರೊ. ಪಿಡಿಜಿ ಪ್ರಕಾಶ್ ಕಾರಂತ್, ರೊ. ಅಶ್ವತ್‌ನಾರಾಯಣ್, ಗವರ್ನರ್ ನಾಮಿನಿ 2026-27 ರೊ. ಬಿ.ಎಂ. ಭಟ್ ಅವರುಗಳ ಪ್ರಶಂಸನಾ ಪತ್ರವನ್ನು ಸಂಕ್ಷಿಪ್ತವಾಗಿ ಓದಿದರು.

ರೊ. ಶಿಲ್ಪಾ ಹೆಚ್.ಜಿ. ಅವರು ದಿನಾಂಕ 25-7-2025ರಂದು ಸೂಗೂರು ಹಾಗೂ ಹೊಳಲೂರು ಶಾಲೆಗಳಲ್ಲಿ ಇಂಟರ‍್ಯಾಕ್ಟ್ ಪದಗ್ರಹಣ ಕಾರ್ಯಕ್ರಮದ ಮಾಹಿತಿಯನ್ನು ನೀಡಿದರು.

ಪೂರ್ವ ಉಪರಾಜ್ಯಪಾಲರಾದ ರೊ. ರಾಜೇಂದ್ರ ಪ್ರಸಾದ್ ಅವರು ಡಿಸ್ಟ್ರಿಕ್ಟ್ ಅವಾರ್ಡ್‌ನಲ್ಲಿ ಯಾವ ರೀತಿಯಲ್ಲಿ ಮೌಲ್ಯಮಾಪನ ಮಾಡುತ್ತಾರೆ ಎನ್ನುವುದರ ಬಗ್ಗೆ ನಾನು ಮುಂದಿನ ದಿನಗಳಲ್ಲಿ ಮಾರ್ಗದರ್ಶನ ಮಾಡುವುದಾಗಿ ತಿಳಿಸಿದರು. ಇದೇ ಸಂದರ್ಭದಲ್ಲಿ ಆಗಸ್ಟ್ 30,31ರಲ್ಲಿ ಕಲ್ಯಾಣ ಪುರದಲ್ಲಿ ನಡೆಯುವ ಡಿಸ್ಟ್ರಿಕ್ಟ್ ಅವಾರ್ಡ್ ಸೇಮಿನಾರ್‌ಗೆ ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ತಿಳಿಸಿದರು.

## ವಾರದ ಸಭೆ




ರೊ. ಡಿ.ಎಂ. ಜಗನ್ನಾಥ್‌ರವರು ಮಾತನಾಡಿ ಪದಗ್ರಹಣ ಸಮಾರಂಭವು ವಿಜೃಂಭಣೆಯಿಂದ ನಡೆದು 3182 ಜಿಲ್ಲೆಯಲ್ಲಿ ವ್ಯಾಪಕವಾಗಿ ಪ್ರಶಂಸೆಗೆ ಒಳಪಟ್ಟಿದೆ ಎಂದು ತಿಳಿಸಿದರು.

ರೊ. ಪ್ರೀತಿ ದೀಪಕ್‌ರವರು ದಿನಾಂಕ 2-8-2025ರಂದು ರೋಟರಿ ಕ್ಲಬ್ ಆವರಣದಲ್ಲಿ ಆ್ಯನ್ಸ್ ಕ್ಲಬ್‌ವತಿಯಿಂದ ನಡೆಯುವ ಡಾ|| ಸ್ನೇಹ ಜ್ಯೋಷಿಯವರಿಂದ ಆರೋಗ್ಯ ಅರಿವು ಕುರಿತು ಕಾರ್ಯಾಗಾರ ಏರ್ಪಡಿಸಿರು




ವುದಾಗಿ ತಿಳಿಸಿದರು.

- 2ನೇ ಪುಟಕ್ಕೆ

- 1ನೇ ಪುಟದಿಂದ

ರೊ. ಸಂತೋಷ್ ಎಸ್.ಎಸ್. ರವರು ಕಳೆದ ವರ್ಷ 48 Skil Development Project ಗಳನ್ನು ನಡೆಸಿದ್ದು, ನಾವು ಈ ವರ್ಷವು ಸಹ ನಮ್ಮ ಕ್ಲಬ್ಬಿನ ಸಂಪನ್ಮೂಲ ವ್ಯಕ್ತಿಗಳ ಮುಖಾಂತರ ನಡೆಸುವುದಾಗಿ ಅನುಮತಿ ಕೋರಿದರು.

ಇಂದಿನ ಹಾಜರಾತಿ ಬಹುಮಾನಕ್ಕೆ ರೊ. ಉದಯ್ ಪೇಟೆ ಮತ್ತು ರೊ. ಡಿ.ಎಂ. ಜಗನ್ನಾಥ್ ಇವರುಗಳು ಪಾತ್ರರಾದರು. ಕೊನೆಯಲ್ಲಿ ಕಾರ್ಯದರ್ಶಿಗಳಾದ ರೊ. ಆರ್.ಎನ್. ಮಂಜುನಾಥ್ ಇವರು ವಂದನಾರ್ಪಣೆ ನೆರವೇರಿಸಿದರು.








25-7-2025ರಂದು ಬೆಳಿಗ್ಗೆ 11 ಗಂಟೆಗೆ ಹೊಳಲೂರಿನ ಮಾರುತಿ ಇಂಟರ್ಯಾಕ್ಟ್ ಕ್ಲಬ್‌ನ ಪದಗ್ರಹಣ ಸಮಾರಂಭವು ಅತ್ಯಂತ ವಿಜೃಂಭಣೆಯಿಂದ ನೆರವೇರಿತು. ಕಾರ್ಯಕ್ರಮವನ್ನು ಸಹಾಯಕ ಸಂಯೋಜಕರಾದ ರೊ. ವೀಣಾ ವಿಶ್ವನಾಥ್ ಅವರು ಅತ್ಯಂತ ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಈ ಸಮಾರಂಭಕ್ಕೆ ರೋಟರಿ ಮಿಡ್‌ಟೌನ್ ಅಧ್ಯಕ್ಷರಾದ ರೊ. ಹರ್ಷ ಬಿ. ಕಾಮತ್ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮವು ವಿದ್ಯಾರ್ಥಿಗಳಾದ ಹರ್ಷಿತ್ ಮತ್ತು ಕುಸುಮಾ ಅವರ ಪ್ರಾರ್ಥನೆಯೊಂದಿಗೆ ಚಾಲನೆ ನೀಡಲಾಯಿತು. ಎಲ್ಲರಿಗೂ ಅಧ್ಯಾಪಕರಾದ ಎಸ್. ಯೋಗೇಶ್‌ರವರು ಆತ್ಮೀಯವಾಗಿ ಸ್ವಾಗತಿಸಿದರು. ರೊ. ಗುರುರಾಜ್ ಎಸ್. ಗಿರಿಮಾಜಿ ಯವರು ಇಂಟರ್ಯಾಕ್ಟ್ ಕ್ಲಬ್‌ನ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯವನ್ನು ನೆರವೇರಿಸಿದರು. ನೂತನ ಪದಾಧಿಕಾರಿಗಳಾಗಿ ಅಧ್ಯಕ್ಷೆ-ನಿರೀಕ್ಷ, ಕಾರ್ಯದರ್ಶಿ-ವಿಕ್ರಂ, ಉಪಾಧ್ಯಕ್ಷೆ-ಪೂಜಾಶ್ರೀ, ಖಜಾಂಚಿ-ಸಿಮ್ರನ್, ಪೂರ್ವ ಅಧ್ಯಕ್ಷೆ- ಭೂಮಿಕಾ, ಜಂಟಿ ಕಾರ್ಯದರ್ಶಿ- ಲಿಂಗರಾಜು, ನಿರ್ದೇಶಕರುಗಳಾಗಿ - ವರುಣ್, ದಾಕ್ಷಾಯಿಣಿ, ನಷ್ರಾ, ಮೊಹಮ್ಮದ್ ರಯನ್, ತನುಶ್ರೀ ಆಯ್ಕೆ ಆಗಿರುತ್ತಾರೆ. ಹಿಂದಿನ ಸಾಲಿನಲ್ಲಿ 10ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಾದ ಲಿಖಿತಾ, ಚೈತ್ರಾ, ಸ್ನೇಹಾ ಮತ್ತು ಸಿಂಚನಾಳಿಗೆ ಪ್ರಶಸ್ತಿ ವಿತರಣೆ ನಡೆಯಿತು. ಪದಗ್ರಹಣಾಧಿಕಾರಿಗಳಾದ ರೊ. ಗುರುರಾಜ್ ಎಸ್. ಗಿರಿಮಾಜಿ ಅವರು ಮಕ್ಕಳಿಗೆ ಪ್ರೇರಣಾದಾಯಕ ಹಿತವಚನ ನೀಡಿದರು. ನ್ಯೂಜನರೇಷನ್ ಡೈರೆಕ್ಟರ್ ರೊ. ಶಿಲ್ಪಾ ಹೆಚ್.ಜಿ. ಇವರು ರೋಟರಿಯ ಬಗ್ಗೆ ಮಾಹಿತಿ ನೀಡಿ, ಮಕ್ಕಳಿಗೆ ಮಾರ್ಗದರ್ಶನ ಭಾಷಣ ಮಾಡಿದರು. ಅಂತಿಮವಾಗಿ ದ್ವಿಗುಣ ಎಂ. ಇವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಕೊನೆಗೊಂಡಿತು. ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ರೊ. ಆರ್.ಎನ್. ಮಂಜುನಾಥ್, ರೊ. ಮೇನಕ ಜಗದೀಶ್, ರೊ. ಉಜ್ವಲ ರವಿ, ರೊ. ಉಮಾ ಅಮರ್, ಆ್ಯನ್ಸ್ ಅಧ್ಯಕ್ಷೆ ಆ್ಯನ್ ಪವಿತ್ರ ಕಾಮತ್, ಕಾರ್ಯದರ್ಶಿ ರೊ. ಪ್ರೀತಿ ದೀಪಕ್, ಪ್ರೌಢಶಾಲೆಯ ಕೋಶಾಧ್ಯಕ್ಷರಾದರ ನಿಂಗಪ್ಪ ಭಾಗವಹಿಸಿದ್ದರು. ಸುಮಾರು 150 ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.










25-7-2025ರಂದು ಮಧ್ಯಾಹ್ನ 4.00 ಗಂಟೆಗೆ ನಡೆದ ಸೂಗೂರಿನ ಡಾ. ಸಿ.ವಿ. ರಾಮನ್ ಇಂಟರ್ಯಾಕ್ಟ್ ಕ್ಲಬ್‌ನ ಪದಗ್ರಹಣ ಸಮಾರಂಭ ಬಹಳ ಅದ್ಭುತವಾಗಿ ನೆರವೇರಿತು. ಕಾರ್ಯಕ್ರಮದ ಸಂಯೋಜಕರಾದ ರಾಜುರವರು ಅಚ್ಚುಕಟ್ಟಾಗಿ ನಡೆಸಿಕೊಟ್ಟರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ತುಂಗಭದ್ರ ಪ್ರೌಢಶಾಲೆಯ ಮುಖ್ಯೋಪಾಧ್ಯಯರಾದ ಶ್ರೀ ದೊಡ್ಡಮನಿ ನಾರಾಯಣ ಇವರು ವಹಿಸಿದ್ದರು. 8ನೇ ತರಗತಿ ವಿದ್ಯಾರ್ಥಿ ಗಣೇಶ್‌ನ ಪ್ರಾರ್ಥನೆಯೊಂದಿಗೆ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಕ್ಲಬ್ಬಿನ ಅಧ್ಯಕ್ಷರಾದ ರೊ. ಹರ್ಷ ಬಿ. ಕಾಮತ್‌ರವರು ಪದಗ್ರಹಣ ಸಮಾರಂಭವನ್ನು ನೆರವೇರಿಸಿ ಮಾತನಾಡಿದರು. ನೂತನ ಪದಾಧಿಕಾರಿಗಳಾಗಿ ಅಧ್ಯಕ್ಷೆ - ಮೇಘನ, ಉಪಾಧ್ಯಕ್ಷೆ- ನಮಿತ, ನಿಕಟ ಪೂರ್ವ ಅಧ್ಯಕ್ಷೆ- ಸ್ಪಂದನ, ಕಾರ್ಯದರ್ಶಿ-ಲಿಖಿತ, ಖಜಾಂಚಿ-ಹೇಮಂತ್ ಟಿ.ಎಸ್., ನಿರ್ದೇಶಕರುಗಳಾಗಿ - ಗಗನ ಎಸ್.ಜಿ. ಜೀವನ್ ಜಿ., ಕಾವ್ಯ, ಸಹನ ಮತ್ತು ಲಾವಣ್ಯ ಆಯ್ಕೆಯಾಗಿರುತ್ತಾರೆ. ಕಳೆದ ವರ್ಷ 10ನೇ ತರಗತಿಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಮೊದಲ ಮೂರು ವಿದ್ಯಾರ್ಥಿಗಳಾದ ಮಧುಮತಿ, ಅಮೂಲ್ಯ, ಚಿತ್ರಶ್ರೀರವರಿಗೆ ಬಹುಮಾನ ವಿತರಿಸಲಾಯಿತು. ನ್ಯೂಜನರೇಷನ್ ಡೈರೆಕ್ಟರ್ ರೊ. ಶಿಲ್ಪಾ ಹೆಚ್.ಜಿ. ಇವರು ರೋಟರಿಯ ಬಗ್ಗೆ ಮಾಹಿತಿ ನೀಡಿ, ಮಕ್ಕಳಿಗೆ ಮಾರ್ಗದರ್ಶನ ಭಾಷಣ ಮಾಡಿದರು. ಕಾರ್ಯಕ್ರಮದ ಸಂಯೋಜಕರಾದ ರಾಜುರವರು ವಂದನಾರ್ಪಣೆಯನ್ನು ನೆರವೇರಿಸಿದರು.

ಕಾರ್ಯಕ್ರಮದಲ್ಲಿ ಕಾರ್ಯದರ್ಶಿ ರೊ. ಆರ್.ಎನ್. ಮಂಜುನಾಥ್, ರೊ. ಮೇನಕ ಜಗದೀಶ್, ರೊ. ಉಜ್ವಲ ರವಿ, ಆ್ಯನ್ಸ್ ಅಧ್ಯಕ್ಷೆ ಆ್ಯನ್ ಪವಿತ್ರ ಕಾಮತ್, ಕಾರ್ಯದರ್ಶಿ ರೊ. ಪ್ರೀತಿ ದೀಪಕ್‌ರವರು ಪಾಲ್ಗೊಂಡಿದ್ದರು.

**Donate Blood and Save Lives**




## 4 WAY TEST

**of the things we think, say or do :**

1. Is it the **TRUTH?**
2. Is it **FAIR** to all concerned?
3. Will it build **GOODWILL** and **BETTER FRIENDSHIPS**?
4. Will it be **BENEFICIAL** to all concerned?

## ROTARY INFORMATION



**Rtn. Ujwala Ravi**

**The Rotary Club of Vijayawada Midtown, currently the world's largest Rotary club, boasts around 855 active members**

(Founded : Dec 12, 1984; chartered Apr 24, 1985)

Ranked #1 globally with 855 members, ahead of :

Oklahoma City Downtown : 584

Birmingham, AL : 583

Atlanta GA : 487

Baton Rouge : 478

RC Chennai Icons sets world record with 225 charter members

On Jan 1, 2025, RI District 3233 achieved a remarkable milestone with the formation of RC Chennai Icons, inducting 225 charter members — setting a probable new world record. The previous RI record stood at 221 charter members, while in India, a Rotary club in Bengaluru had held the record with 151 members,

Dear Rotarians,

Please make up your attendance, by attending the following Rotary Club Meeting at Shimoga.

| | |
|---|---|
| ROTARY CLUB SHIMOGA | |
| Wednesday, Rotary Youth Centre, Savalanga Road | 6.45 p.m. |
| ROTARY CLUB SHIMOGA EAST | |
| Friday, Rotary School | 7.00 p.m. |
| ROTARY CLUB SHIMOGA CENTRAL | |
| Tuesday, IMA Hall | 8.00 p.m. |
| ROTARY CLUB SHIMOGA NORTH | |
| Tuesday, North Bhavan, Gadikoppa | 7.00 p.m. |
| ROTARY CLUB SHIMOGA RIVERSIDE | |
| Wednesday, Riverside Bhavan | 8.00 p.m. |
| ROTARY CLUB SHIMOGA JUBILEE | |
| Saturday, Rotary Youth Centre | 8.30 a.m. |
| ROTARY CLUB SHIMOGA MALNAD | |
| Friday, Friend Center Hall, Opp. Vishal Mart, Gopala | 6.30 p.m. |

## FEES STRUCTURE 2025-26

As you all know that fees for the Year 25-26 had been fixed at Rs. 17,000 (Including Dinner)

Rs. 17,000 before 31/07/2025 - Full year fees Or you can pay in 2 Installments.

1) Rs. 10,000 before 31/07/2025 - First half year fees
2) Rs. 7,000 before 31/01/2025 - Second half year fees

**For Lady Rotarians full year fees Rs 9,500 before 31/07/2025**




### ROTARIAN BIRTHDAY *Greetings to*

Rtn. Dr. Dharani Devangi Jul-27

Rtn. Namitha Dhananjay Jul-30



### MARRIAGE ANNIVERSARY *Greetings to*

Rtn. Harsha Kamath Jul-25

Ann. Pavithra



### ANN BIRTHDAY *Greetings to*

Ann. Savitha Ravikumar Jul-28

Printed at : A.S.R. Offset Printers, #4, Dargah Complex, Tilak Nagar Main Road, SHIMOGA-577201, Ph : 278764